ಸರ್ಕಾರದ ಬಳಿಯಿದ್ದು ಹಣ ಬಿಡುಗಡೆಯಾಗಿ ಐದು ತಿಂಗಳು ಕಳೆದಿದ್ದರೂ 1994-95ನೇ ಸಾಲಿನ ಬಗ್ಗೆ ಮಾಹಿತಿಯನ್ನು ಏಕೆ ಕೊಟ್ಟಿಲ್ಲ? ಇದರ ಬಗ್ಗೆ ಇನ್ನೊಂದು ವಿಚಾರ ಹೇಳುವುದಕ್ಕೆ ಇಚ್ಚಿಪಡಿತ್ತೆನೆ. ನಾವು ಕೆಲವು ಇಲಾಖೆಗಳನ್ನು ರಿವ್ಯೂ ಮಾಡಿದಂಥ ಸಂದರ್ಭದಲ್ಲಿ 1994-95ನೇ ಸಾಲಿಗೆ ಕೇಂದ್ರ ಸರ್ಕಾರದಿಂದ ಬಂದಂಥ ಅನುದಾನದಲ್ಲಿ ಸ್ವಲ್ಪ ಹಣ ಉಪಯೋಗವಾಗಿದೆ ಉಳಿದಿದ್ದರಿಂದ ಆ ಹಣ ರಾಜ್ಯದಿಂದ ಕೇಂದ್ರಕ್ಕೆ ವಾಪಸ್ಸು ಹೋಗಿದೆ. ಆದರೆ ಇದು ಅನುಮೋದನೆ ಆಗಿಲ್ಲದಿರುವುದರಿಂದ ದಯವಿಟ್ಟು ಇದರ ಬಗ್ಗೆ ಉತ್ತರ ಕೊಡಬೇಕಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, 1994-95ನೇ ಸಾಲಿನಲ್ಲಿ ಪರಿಷ್ಕೃತ ಅಂದಾಜಿನಂತೆ ಎಷ್ಟು ಅನುದಾನ ಬಂದಿದೆಯೆಂದು ಅಂಕಿ-ಅಂಶಗಳಿದ್ದರೂಸಹ ಅದರ ಪೂರ್ಣ ಲೆಕ್ಕ ಸರ್ಕಾರಕ್ಕೆ ಇನ್ನೂ ಬಾರದಿರುವುದರಿಂದ, ಸರ್ಕಾರದ ಬಳಿ ಆ ಮಾಹಿತಿ ಇಲ್ಲದಿರುವುದರಿಂದ ಅಂಕಿ-ಅಂಶಗಳನ್ನು ಕೊಟ್ಟಿಲ್ಲ, ಮತ್ತು 1995-96ನೇ ಸಾಲಿನ ಆಯ-ವ್ಯಯದಲ್ಲೂ ಎಷ್ಟು ಅನುದಾನ ಬರುತ್ತದೆಂಬ ವಿಚಾರ ಹೇಳಿದ್ದೇವೆ. ಕೇಂದ್ರ ಸರ್ಕಾರದಿಂದ ಬಂದಿರತಕ್ಕ ಅನುದಾನ ಮತ್ತು ನಾವು ಕೊಡುವ ಮ್ಯಾಚಿಂಗ್ ಗ್ರಾಂಟ್, ಇವೆರಡೂ ಸಂಪೂರ್ಣವಾಗಿ ಖರ್ಚಾಗಿದೆ. ಆದರೆ, 1994-95ನೇ ಸಾಲಿನ ಲೆಕ್ಕ ಸಂಪೂರ್ಣವಾಗಿ ಸರ್ಕಾರಕ್ಕೆ ಬಾರದಿರುವುದರಿಂದ ವಿವರ ಕೊಡುವುದಕ್ಕೆ ಸಾಧ್ಯವಾಗಿಲ್ಲ.

ಮಾಜಿ ಸಚಿವರುಗಳಿಂದ ಬರಬೇಕಾಗಿರುವ ಮೊತ್ತ

83 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದ ಮಾಜಿ ಸಚಿವರುಗಳಿಂದ ಸರ್ಕಾರಕ್ಕೆ ವಿವಿಧ ಬಾಬುಗಳಿಗಾಗಿ ಬರಬೇಕಾಗಿರುವ ಮೊತ್ತವೆಷ್ಟು? ಪ್ರತಿ ಸಚಿವರು ಹೆಸರು ಬರಬೇಕಾಗಿರುವ ಬಾಕಿ. ಯಾವ ಬಾಬುಗಾಗಿ ಬರಬೇಕು. ಇತ್ಯಾದಿ ವಿವರಗಳನ್ನು ಒದಗಿಸುವುದು.*

ಆ) *ಸರ್ಕಾರ ಈ ಬಾಕಿಯನ್ನು ಮನ್ನಾ ಮಾಡುವ ಉದ್ದೇಶವನ್ನು ಹೊಂದಿದೆಯೇ?*

ಇ) *ಈ ಮಾಜಿ ಸಚಿವರು ಬರಬೇಕಾದ ಬಾಕಿ ಮೊತ್ತವನ್ನು ವಸೂಲಿ ಮಾಡಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?*

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಗಳು) :

ಅ) ರೂ. 1,30,69,934-90 ಈ ಬಗ್ಗೆ ಅನುಬಂಧದಲ್ಲಿ ವಿವರಿಸಲಾಗಿದೆ.

ಆ) ಇಲ್ಲ

ಇ) ಬಾಕಿಯ ಬಗ್ಗೆ ಮಾಜಿ ಸಚಿವರುಗಳಿಗೆ ವಿವರಗಳನ್ನು ಒದಗಿಸಲಾಗಿದೆ. ಯಾವುದೇ ಸಚಿವರು ಬಾಕಿ ಇರುವ ಸರ್ಕಾರದ ಹಣವನ್ನು ತುಂಬಿಸದೇ ಇದ್ದ ಪಕ್ಷದಲ್ಲಿ ಈ ಹಣವನ್ನು ಕರ್ನಾಟಕ ಶಾಸಕರ ವೇತನ ವಿಶ್ರಾಂತಿ. ವೇತನ ಮತ್ತು ಭತ್ಯೆಗಳ ಅಧಿನಿಯಮ, 1956ರ ನಿಯಮ 13ಬಿ ಯನ್ವಯ, ಅಂತಹ ಸಚಿವರುಗಳಿಗೆ ನೀಡಬೇಕಾಗಿರುವ ಪಂಚಣಿಯಿಂದ ಕಡಿತಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಅನುಬಂಧ –'ಬಿ'

ಮಾಜಿ ಸಚಿವರುಗಳಿಂದ ಸರ್ಕಾರಕ್ಕೆ ಬರಬೇಕಾದ ಬಾಕಿಯ ಬಗ್ಗೆ ವಿವರಗಳು :

			ಬಾಕಿಯ ಬಗ್ಗೆ ವಿವರಗಳು				
ಕ್ರಮ ಸಂಖ್ಯೆ	ಸಚಿವರ ಹೆಸರು	ಪಿ.ಡಬ್ಲ್ಯೂ.ಡಿ. (ಕಾರ್ಯಕಾರಿ)	ಕುಮಾರ ಕೃಪ	ಕರ್ನಾಟಕ ಭವನ	ಸಿಆಸುಇ	ಇತರೆ	ಒಟ್ಟು ಮೊತ್ತ
1	2	3	4	5	6	7	8
	ಶ್ರೀ ಯುತರುಗಳಾದ,						
1.	ಎಸ್. ಬಂಗಾರಪ್ಪ	447829-00	ಬಾಕಿ ಇಲ್ಲ	ಬಾಕಿ ಇಲ್ಲ	ಬಾಕಿ ಇಲ್ಲ	-	447829-00
2.	ಎಂ. ರಾಜಶೇಖರ ಮೂರ್ತಿ	28834-00	"	"	"	-	28834-00
3.	ಅಜೀಜ್ ಸೇಠ್	9965-50					
		31029-00	"	"	"	-	40994-50
4.	ಟಿ.ಎನ್. ನರಸಿಂಹಮೂರ್ತಿ	74475-00	"	4297-00	"	-	78772-00
5.	ಕೆ.ಜೆ. ಜಾರ್ಜ್	236606-00	"	125-00	"	-	236731-00
6.	ಎಸ್. ಮಲ್ಲಾರಿಗೌಡ ಪಾಟೀಲ್	330540-00	"	1071-00	"	-	331611-00
7.	ಜೆ.ಹೆಚ್. ಅಕ್ಕತ್ತ ರೆಡ್ಡಿ	264218-00	"	ಬಾಕಿ ಇಲ್ಲ	ಬಾಕಿ ಇಲ್ಲ	-	264218-00
8.	ಪುಟ್ಟಸ್ವಾಮಿಗೌಡ	254817-00	"	"	"	-	254817-00
9.	ಎನ್. ಚಿಕ್ಕೇಗೌಡ	91933-00	ಬಾಕಿ ಇಲ್ಲ	"	"	-	91933-00
10.	ನಜೀರ್‌ಅಹ್ಮದ್	753976-00	"	"	950-00	37919-00	798959-00
						6114-00	
11.	ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ	178636-00	"	"	ಬಾಕಿ ಇಲ್ಲ	-	178636-00
12.	ಎಂ.ಎಲ್. ಉಸ್ತಾದ	224555-00	ಬಾಕಿ ಇಲ್ಲ	"	"	-	224555-00

13.	ಎ.ಎಸ್. ನಾಡಗೌಡ	192220-00	ಬಾಕಿ ಇಲ್ಲ	10005-00	ಬಾಕಿ ಇಲ್ಲ	-	202225-00
14.	ನಿಸಾರ್ ಅಹಮದ್	119064-00	22634-00	271-00	"	-	141969-00
15.	ಈ. ಟಿ. ಶಂಬುನಾಥ್	124834-00	ಬಾಕಿ ಇಲ್ಲ	ಬಾಕಿ ಇಲ್ಲ	"	-	124834--0
16.	ಬಸವರಾಜ್ ಪಾಟೀಲ್	293341-00	"	"	"	-	293341-00
17.	ಎ.ಎಂ. ಚಿಕ್ಕಯಪ್ಪ	125226-00	"	"	"	9026-00	134252-00
18.	ರಾಜಾ ಅಮರೇಶ್ ನಾಯಕ್	194039-00	"	"	ಬಾಕಿ ಇಲ್ಲ	-	194039-00
19.	ಎಸ್.ಆರ್. ಮೋರೆ	414161-00	"	150-00	"	-	4141311-00
20.	ಎಂ. ರಾಮಪ್ಪ	268134-00	"	928-00	645-00	-	269707-00
21.	ಹೆಚ್.ಡಿ. ಲಮಾಣಿ	12809-00	"	ಬಾಕಿ ಇಲ್ಲ	1200-00	-	14009-00
22.	ಎನ್.ಜಿ. ಹಾಲಪ್ಪ	212277-00	"	"	ಬಾಕಿ ಇಲ್ಲ	-	212277-00
23.	ಡಿ.ಕೆ. ಶಿವಕುಮಾರ್	679077-00	"	"	645-00	-	679722-00
24.	ಎಂ. ವೀರಪ್ಪ ಮೊಯಿಲಿ	294600-00	3860-00	ಬಾಕಿ ಇಲ್ಲ	ಬಾಕಿ ಇಲ್ಲ	55000-00 1605-00 9745-30	364810-30
25.	ಎಸ್.ಎಂ. ಕೃಷ್ಣ	72648-00	ಬಾಕಿ ಇಲ್ಲ	396-00	120000-00	-	193044-00
26.	ಕೆ.ಎಚ್. ರಂಗನಾಥ್	63177-00 36442-00	"	ಬಾಕಿ ಇಲ್ಲ	ಬಾಕಿ ಇಲ್ಲ	-	99619-00
27.	ಹುಚ್ಚಮಾಸ್ತಿಗೌಡ	264451-00	"	322-00	3840-00	-	268613-00
28.	ಧರ್ಮಸಿಂಗ್	68023-00	"	2406-00	ಬಾಕಿ ಇಲ್ಲ	-	70429-00
29.	ಮಲ್ಲಿಕಾರ್ಜುನ ಎಂ. ಖರ್ಗೆ	46625-00	ಬಾಕಿ ಇಲ್ಲ	ಬಾಕಿ ಇಲ್ಲ	ಬಾಕಿ ಇಲ್ಲ	-	46625-00
30.	ಎಸ್. ಎಂ. ಯಾಹ್ಯಾ	149173-50 19082-00	"	309-00	"	-	168564-50
31.	ಶ್ರೀಮತಿ ಮನೋರಮಾ ಮಧ್ವರಾಜ್	93282-00	"	ಬಾಕಿ ಇಲ್ಲ	"	-	93282-00

32.	ಹಾರನಹಳ್ಳಿ ರಾಮಸ್ವಾಮಿ	33767-00	120-00	"	"		33887-00
33.	ಕಾಗೋಡು ತಿಮ್ಮಪ್ಪ	13040-00	ಬಾಕಿ ಇಲ್ಲ	"	ಬಾಕಿ ಇಲ್ಲ	1764-00	14804-00
34.	ಬ್ಲೇಸಿಯಾಸ್ ಡಿ.ಸೋಜ	33079-00	"	"	"	-	33079-00
35.	ಬಿ. ಶಿವಣ್ಣ	70797-00	5795-00 2440-00	265-00	"	24194-00	103491-00
36.	ಭೀಮಣ್ಣ ಖಂಡ್ರೆ	35222-00	21789-00	ಬಾಕಿ ಇಲ್ಲ	ಬಾಕಿ ಇಲ್ಲ	120-00	57131-00
37.	ಬೌಡರೆಡ್ಡಿ	341348-00	3674-00 12113-00	"	2742-60	-	359877-60
38.	ಗೋಪಿನಾಥ್ ಆರ್, ಸಾಂದ್ರ	73456-00	ಬಾಕಿ ಇಲ್ಲ	"	ಬಾಕಿ ಇಲ್ಲ	-	73456-00
39.	ಶ್ರೀಮತಿ ನಾಗಮ್ಮ ಕೇಶವ ಮೂರ್ತಿ	31035-00 5986-00	ಬಾಕಿ ಇಲ್ಲ	"	"	-	37021-00
40.	ಎಸ್. ರಮೇಶ್	226727-00	"	109724-00	"	646-00	337097-00
41.	ಬಿ.ಎಸ್. ಪಾಟೀಲ್ ಸಾಸನೂರ್	468397-00	"	"	"	120-00	468517-00
42.	ಹೆಚ್.ಎಂ. ರೇವಣ್ಣ	311787-00	"	3565-00	"	-	315352-00
43.	ಸಿ.ಆರ್. ಸಗೀರ್ ಅಹಮದ್	70040-00	59588-00 18308-00	ಬಾಕಿ ಇಲ್ಲ	"	-	147936-00
44.	ಎ.ಬಿ. ಮಲಕರೆಡ್ಡಿ	149258-00	7965-00 7016-00	"	"	24194-00	188403-00
45.	ಹೆಚ್.ವಿಶ್ವನಾಥ್	8799-00	ಬಾಕಿ ಇಲ್ಲ	605-00	3840-00	-	13244-00
46.	ಎ.ಎಂ. ಹಿಂಡಸಗೇರಿ	18274-00	12135-00	ಬಾಕಿ ಇಲ್ಲ	ಬಾಕಿ ಇಲ್ಲ	-	30409-00
47.	ಕೆ.ಎಚ್. ಕರಿಯಮ್ಮೇಗೌಡ	ಬಾಕಿ ಇಲ್ಲ	645-00	648-00	"	-	1293-00
48.	ಡಿ.ಎ. ಚಿಣ್ಣಪ್ಪ	7547-00	ಬಾಕಿ ಇಲ್ಲ	58-00	"	-	7605-00
49.	ಎಂ. ಪಿ. ಕೇಶವಮೂರ್ತಿ	61816-00	ಬಾಕಿ ಇಲ್ಲ	ಬಾಕಿ ಇಲ್ಲ	ಬಾಕಿ ಇಲ್ಲ	-	61816-00

50.	ಆರ್.ಬಿ. ಚೌಧರಿ	315508-00	"	"	"	2276-00 3	37784-00
51.	ಪೆರಿಕಾಲ್ ಮಲ್ಲಪ್ಪ	328502-00	"	824-00	"	-	329326-00
52.	ಎ. ಕೃಷ್ಣಪ್ಪ	86852-00	"	ಬಾಕಿ ಇಲ್ಲ	"	-	86852-00
53.	ಹೆಚ್.ಕೆ. ಪಾಟೀಲ್	ಮಾನ್ಯರು ಹಾಲಿ ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರಾಗಿದ್ದು ವಸತಿ ಗೃಹವನ್ನು ಮುಂದುವರಿಸ ಲಾಗಿರುವುದರಿಂದ ಬಾಕಿ ಪ್ರಶ್ನೆ ಉದ್ಭವಿಸುವುದಿಲ್ಲ.	255678-00	254-00	"	-	255932-00
54.	ಡಾ ಜಿ, ಪರಮೇಶ್ವರ್	30578--00	ಬಾಕಿ ಇಲ್ಲಾ	ಬಾಕಿ ಇಲ್ಲ	15123-00	-	320904-00
55.	ಮದನಗೋಪಾಲ ನಾಯಕ್	363863-00	"	"	ಬಾಕಿ ಇಲ್ಲ	-	363863-00
56.	ರಮಾನಾಥ ರೈ	462384-00	"	"	3840-00	35-00	466259-00
57.	ರಾಮಲಿಂಗರೆಡ್ಡಿ	8748-00	"	33227-00	ಬಾಕಿ ಇಲ್ಲ	25-00	42000-00
58.	ಓಂ. ಪ್ರಕಾಶ್ ಕಣಗಲಿ	25306-00	"	ಬಾಕಿ ಇಲ್ಲ	3840-00	-	29146-00
59.	ಕೆ. ಶಿವಮೂರ್ತಿ	61949-00	"	900-00	ಬಾಕಿ ಇಲ್ಲ	-	62849-00
60.	ಎಂ.ಎಸ್. ಆತ್ಮಾನಂದ	282863-00	"	ಬಾಕಿ ಇಲ್ಲ	645-00	-	283508-00
61.	ವಿ. ಮುನಿಯಪ್ಪ	132655-00	"	"	ಬಾಕಿ ಇಲ್ಲ	-	132655-00
62.	ಹೆಚ್.ಆರ್ ರಾಜು	58205-00	2065-00	"	ಬಾಕಿ ಇಲ್ಲ	-	60270-00
63.	ಬಿ.ಎಸ್. ಪಾಟೀಲ್ ಮನಗೋಳಿ	53718-00	ಬಾಕಿ ಇಲ್ಲ	ಬಾಕಿ ಇಲ್ಲ	ಬಾಕಿ ಇಲ್ಲ	30323-00	84041-00
64.	ಆರ್.ಎನ್. ನಾಯಕ್	6991-00	ಬಾಕಿ ಇಲ್ಲ	"	"	-	6991-00
65.	ಶ್ರೀಮತಿ ಸುಮಾ ವಸಂತ್	54582-00					
		214443-00	"	"	-	24516-00	293541-00
66.	ವಸಂತ್ ವಿ. ಸಾಲಿಯಾನ	14944-00	"	"	"	-	14944-00

67.	ಜಿ. ರಾಮಕೃಷ್ಣ	20215-00	"	"	"	-	20215-00
68.	ಕೆ.ಎನ್. ನಾಗೇಗೌಡ	326103-00	"	"	"	-	326103-00
69.	ಪ್ರಭಾಕರ ರಾಣೆ	103856-00	"	689-00	"	-	104545-00
70.	ಡಿ. ಪ್ರೇಮಚಂದ್ರ ಸಾಗರ್	38259-00	"	ಬಾಕಿ ಇಲ್ಲ	"	-	38259-00
	ಒಟ್ಟು:	12078138-00	435825-00	171039-00	157310-60	227622-30	13069934-00

70 ಮಾಜಿ ಸಚಿವರುಗಳಿಂದ ಸರ್ಕಾರಕ್ಕೆ ಒಟ್ಟಾರೆ ರೂ. 1,30,69,934,90 ಗಳಷ್ಟು ಬಾಕಿ ಇರುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಪ್ರಶ್ನೆಗಳಿಗೆ ಒದಗಿಸಿರುವ ಉತ್ತರ ಅಪೂರ್ಣವಾಗಿದೆ. ಮೊದಲನೆಯದಾಗಿ, ತಾವು ಉತ್ತರ ಕೊಡಬೇಕಾದರೆ ಕೇವಲ ಕಾಂಗ್ರೆಸ್ ಪಕ್ಷದ ಸರ್ಕಾರದ ಸಚಿವರು ಯಾರಿದ್ದರು. ಅವರ ಬಗ್ಗೆ ಬಾಕಿ ಪಟ್ಟಿ ವಿವರ ಕೊಟ್ಟಿದ್ದೀರೆಯೇ ವಿನಾಹ ಹಿಂದಿನ ಜನತಾ ದಳ ಸರ್ಕಾರದಲ್ಲಿದ್ದ ಸಚಿವರು ಯಾರಿದ್ದರು. ಅವರ ಹೆಸರುಗಳ ಬಾಕಿ ಪಟ್ಟಿಯನ್ನು ಬಿಟ್ಟಿರುವುದಕ್ಕೆ ಕಾರಣವೇನು? ಎಂಬುದು ನನಗೆ ಗೊತ್ತಾಗಲಿಲ್ಲ. ತಾವು ಹೇಳದಂತೆ 1 ಕೋಟಿ 38 ಲಕ್ಷ ರೂಪಾಯಿಗಳ ಬಾಕಿ ಹಣ ಎನಿದೆ. ಇದನ್ನು ಫ್ಲೆನ್ ಮೂಲಕ ಹಿಡಿಯುತ್ತೇವೆಂದರೆ. ಇನ್ನು ಐವತ್ತು ವರ್ಷಗಳಾದರೂ ಹಿಡಿಯುವುದಕ್ಕಾಗುವುದಿಲ್ಲ. ಇದು ಮುಗಿಯುವುದಿಲ್ಲ. ಇದು ಬರೀ ಒಬ್ಬರದಲ್ಲ. ಸುಮಾರು 59 ಸಾವಿರ ರೂಪಾಯಿಗಳಿಗೂ ಹೆಚ್ಚು ಬಾಕಿ ಹಣ ಇರುವಂಥಾದ್ದನ್ನು ನೋಡುತ್ತಿದ್ದೇವೆ. ಅದಕ್ಕೋಸ್ಕರ ಬಾಕಿ ಇರುವ ಹಣವನ್ನೆಲ್ಲಾ ಒಂದೇ ಬಾರಿಗೆ ವಸೂಲು ಮಾಡುವುದಕ್ಕೆ ವಿಶೇಷ ಗಮನ ಕೊಡಬೇಕು. ಇನ್ನೊಂದು ತುಂಬಾ ದುಃಖ ತರುವಂಥ ಸಂಗತಿ ಏನೆಂದರೆ. ನಾವು ಅನೇಕ ಜನರಿಗೆ ಉಪದೇಶ ಮಾಡುತ್ತೇವೆ. ಆದರೆ ಮಂತ್ರಿಗಳಿಗೆ ಪೀಠೋಪಕರಣಗಳ ಸೌಲಭ್ಯ ಕೊಟ್ಟಾಗ ಅವರ ಅವಧಿ ಮುಗಿದ ಬಳಿಕ ಅವುಗಳನ್ನು ತಮ್ಮ ಜೊತೆಗೆ ತೆಗೆದುಕೊಂಡು ಹೋದರೆನ್ನುವ ಮಾತುಗಳು ಕೆಲವರ ಬಗ್ಗೆ ಬಂದಿದೆ. ಅದುದರಿಂದ ಇನ್ನು ಮುಂದೆ ಯಾವುದೇ ಕಾರಣಕ್ಕೂ ಯಾವುದೇ ಒಬ್ಬ ಸಚಿವನಿಗೆ ಆ ಸವಲತ್ತು ಸಿಕ್ಕಾಗ, ಅವರ ಅವಧಿ ಮುಗಿದ ಬಳಿಕ ಅವುಗಳನ್ನು ತೆಗೆದುಕೊಂಡು ಹೋಗದಂತೆ ಕಟ್ಟುನಿಟ್ಟಿನ, ತೀವ್ರವಾದ ಕ್ರಮ ತೆಗೆದುಕೊಳ್ಳಬಹುದೇ? ಎಂಬುದಕ್ಕೆ ಮುಖ್ಯಮಂತ್ರಿಗಳು ಉತ್ತರ ಕೊಡಬೇಕು.

ಅಧ್ಯಕ್ಷರು : ತಾವು ಪ್ರಶ್ನೆಯನ್ನು ಕೇಳಿದಾಗ ಅದರಲ್ಲಿ ಎಷ್ಟು ವರ್ಷದ್ದೆಂದು ಅವಧಿಯನ್ನು ಸೂಚಿಸಿದ್ದೀರೋ? ಏಕೆಂದರೆ, ನಮ್ಮ ಪ್ರಶ್ನೋತ್ತರ ದಾಖಲೆಯಲ್ಲಿ ಆಡಳಿತದ ಅನುಕೂಲಕ್ಕಾಗಿ ನಾವು ಒಂದು ಪದ್ಧತಿ ಅಳವಡಿಸಿಕೊಂಡಿದ್ದೇವೆ. ಯಾವುದೇ ಅಂಕಿ-ಅಂಶಗಳನ್ನು ಕೇಳಿದಾಗ ತಕ್ಷಣಕ್ಕೆ ಐದು ವರ್ಷಗಳ ಮಾಹಿತಿಯನ್ನು ಒದಗಿಸುತ್ತಿದ್ದೇವೆ. ಬಹಳ ಹಿಂದಿನದು ಮಾಹಿತಿ ಬೇಕೆಂದರೆ ಸಮಯ ಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನನ್ನ ಪ್ರಶ್ನೆ ಏನೆಂದರೆ ರಾಜ್ಯದ ಮಾಜಿ ಸಚಿವರುಗಳಿಂದ ಸರ್ಕಾರಕ್ಕೆ ವಿವಿಧ ಬಾಬುಗಳಿಗಾಗಿ ಬರಬೇಕಾಗಿರುವ ಮೊತ್ತವೆಷ್ಟು? ಪ್ರತಿ ಸಚಿವರ ಹೆಸರು. ಬರಬೇಕಾಗಿರುವ ಬಾಕಿ.ಯಾವ ಬಾಬಿಗಾಗಿ ಬರಬೇಕು? ಇತ್ಯಾದಿ ವಿವರಗಳನ್ನೊದಗಿಸುವುದು ಎಂಬುದು. ಇಲ್ಲದಿದ್ದರೆ ಏನಾಗುತ್ತದೆಂದರೆ ಮಾಜಿ ಸಚಿವರುಗಳು ಕೈಬಿಟ್ಟು ಹೊರಟು ಹೋಗುತ್ತಾರೆ. ಹಾಲಿ ಇರುವವರನ್ನು ತೆಗೆದುಕೊಂಡು ಅವರು ಹಾಗೇ ಗುಂಪಿನಲ್ಲಿ ಗೋವಿಂದ ಆಗಬಾರದೆಂದು ನಾನು ಕೇಳಿದೆ.

ಅಧ್ಯಕ್ಷರು : ಸನ್ಮಾನ್ಯ ಸಭಾ-ನಾಯಕರೆ, ತಮ್ಮ ಕಡೆಯಿಂದ ಇದರಲ್ಲಿ ಏನೂ ಲೋಪವಾಗಿಲ್ಲ. ವಿಧಾನಮಂಡದಲ್ಲಿರುವ ಪ್ರಶ್ನೋತ್ತರ ಶಾಖೆಯಲ್ಲಿ ಪ್ರಶ್ನೆಯನ್ನು ಅಡಿಟ್ ಮಾಡಿ ಕಳುಹಿಸುವಾಗ ಬಹಳ ಹಿಂದಿನ ವರ್ಷಗಳ ಅಂಕಿ-ಅಂಶಗಳನ್ನು ಕೇಳಿದರೆ ಕ್ರೂಢೀಕರಿಸುವುದು ಕಷ್ಟವಾಗುತ್ತದೆಂಬ ಕಾರಣಕ್ಕಾಗಿ ಐದು ವರ್ಷಗಳ ಡೆಡ್‌ಲೈನ್ ಹಾಕಿಕೊಂಡಿದ್ದೇವೆ. ಹಾಗಾಗಿ ತಕ್ಷಣಕ್ಕೆ ಐದು ವರ್ಷಗಳ ಮಾಹಿತಿಯನ್ನು ಕಳುಹಿಸಿದ್ದಾರೆಂದು ಅನ್ನಿಸುತ್ತದೆ. ಇದರ ಬಗ್ಗೆ ವಿರೋಧ ಪಕ್ಷದ ನಾಯಕರು ಎಲ್ಲಾ ಕೇಳುತ್ತಿರುವುದರಿಂದ you can get details and pass it on.

ಶ್ರೀ ಹೆಚ್.ಡಿ. ದೇವೇಗೌಡ : ಇದರಲ್ಲಿ ಒತ್ತಡವೇನೂ ಇಲ್ಲ. ಅದನ್ನು ನಾನು ಏಕೆ ಮುಚ್ಚಿಹಾಕಬೇಕು? ಇದರ ಬಗ್ಗೆ ನಾನು ಪಿಡಬ್ಲ್ಯೂಡಿ ಕಾರ್ಯದರ್ಶಿಯವರನ್ನು

ಕೇಳಿದಾಗ, ಅವರೂ ಸಹ ಅದನ್ನೇ ಹೇಳಿದರು. ಯಾವುದೇ ಮಾಹಿತ ಇದ್ದರೂ ಅದನ್ನು ಸದನದ ಮುಂದಿಡುತ್ತೇನೆ. ಇದರಲ್ಲಿ ಮುಚ್ಚುಮರೆ ಏನೂ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ತಮ್ಮ ಬಗ್ಗೆ ಆರೋಪ ಮಾಡುತ್ತಿಲ್ಲ. ಪ್ರಶ್ನೆ ಕೇಳಿದಂಥ ಉದ್ದೇಶವೇನೆಂದರೆ, ಇತ್ತೀಚಿನ ದಿವಸಗಳಲ್ಲಿ ನನಗೆ ತಿಳಿದು ಬಂದಿರುವಂಥಾದ್ದು ಏನೆಂದರೆ, 4-6ವರ್ಷಗಳಿಂದ ಹಣದ ಬಾಕಿ ಪಟ್ಟಿ ಇಟ್ಟಿರುವಂಥಾದ್ದು ಹಾಗೆಯೇ ಮುಚ್ಚಿ ಹೋಗುತ್ತಿದೆಯೆಂಬ ಸುದ್ದಿ ಇದೆ. ಏಕೆಂದರೆ. ಇದು ಕಾನೂನಿನ ಪ್ರಶ್ನೆಯಾಗಿರುವುದರಿಂದ, ಅದರ ಬಗ್ಗೆ ಮಾತನಾಡಿ ಕಾನೂನು ರೀತ್ಯ ವಿವರ ಕೊಡುವುದಕ್ಕೆ ದಾಖಲಾತಿಗಳಿಲ್ಲ. ಅದಕ್ಕೋಸ್ಕರ ತಮ್ಮ ಮೂಲಕ ಮುಖ್ಯಮಂತ್ರಿಗಳನ್ನು ಕೇಳುತ್ತಿರುವುದೇನೆಂದರೆ, ಮತ್ತೊಮ್ಮೆ ಅದರ ಪಟ್ಟಿಯನ್ನು ತರಿಸಿಕೊಡುವ ವ್ಯವಸ್ಥೆ ಮಾಡಿ. ಮತ್ತು ಕೊನೆಯ ಪಕ್ಷ ಸಚಿವರು ತಮ್ಮ ಅವಧಿ ಮುಗಿದ ಬಳಿಕ ಪೀಠೋಪಕರಣಗಳನ್ನು ತಮ್ಮ ಜೊತೆ ಸಾಗಿಸುತ್ತಿರುವುದರ ಬಗ್ಗೆ ಇನ್ನು ಮುಂದಾದರೂ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೀರೋ?

ಶ್ರೀ ಹೆಚ್.ಡಿ. ದೇವೇಗೌಡ ಇದಕ್ಕೆ ಕಾನೂನು ಇದೆ. ಏನೆಂದರೆ ಉಪಯೋಗಿಸಲಾದ ಉಪಕರಣಗಳನ್ನು ಸರ್ಕಾರಕ್ಕೆ ಇಂತಿಷ್ಟು ಪರ್ಸೆಂಟೇಜ್ ಕೊಟ್ಟು ತೆಗೆದುಕೊಂಡು ಹೋಗುವಂಥ ವ್ಯವಸ್ಥೆ ಇದೆ. ಈ ಕಾನೂನನ್ನು ಬದಲಾಯಿಸಲು ನನ್ನದೇನೂ ತಕಾರಾರಿಲ್ಲ.ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುತ್ತೇನೆ.ಏನೆಂದರೆ ಸಚಿವರು.ತಮ್ಮ ಅವಧಿ ಮುಗಿಸಿ ತೆರಳಿದಾಗ ಅವರ ಮನೆಯಲ್ಲಿ ಕೆಲವು ವಸ್ತುಗಳು ಕಡಿಮೆ ಇರುತ್ತದೆ. ಮತ್ತೆ ಕೆಲವು ಸಾಮಾನುಗಳು ಇರುವುದಿಲ್ಲ. ಇದಕ್ಕೆ ನಾವು ಹಣವನ್ನು ವಸೂಲು ಮಾಡದೆ ಏನು ಮಾಡಬೇಕು? ಇನ್ನು ಕೆಲವು ವಸ್ತುಗಳು ಹಾಳಾಗಿರುತ್ತವೆ., ಕೆಲವು ವಸ್ತುಗಳಿಗೆ ವಸೂಲು ಮಾಡಬೇಕಾಗುತ್ತದೆ. There are certain procedures. ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದನ್ನು ಒಪ್ಪಿಕೊಳ್ಳುತ್ತೇನೆ. ನಾವೆಲ್ಲರೂ ಸರ್ಕಾರದ ಚುನಾಯಿತ ಪ್ರತಿನಿಧಿಗಳಾಗಿದ್ದು, ಜವಾಬ್ದಾರಿ ಸ್ಥಾನದಲ್ಲಿರುವವರು, ಸರ್ಕಾರಕ್ಕೆ ಕೊಡಬೇಕಾದ ಬಾಕಿ ಹಣವೇನಿದೆ. ಇದನ್ನು ನಾವೇ ಅರ್ಥ ಮಾಡಿಕೊಂಡು ಕೊಡುವುದಕ್ಕೆ ಪ್ರಯತ್ನಿಸಬೇಕು. ಕಾನೂನು ರೀತ್ಯ ಕ್ರಮ ತೆಗೆದುಕೊಳ್ಳುವುದು ಅನಂತರ. ಚುನಾಯಿತ ಪ್ರತಿನಿಧಿಗಳಾಗಿ ನಾವು ಇತರರಿಗೆ ಮಾರ್ಗದರ್ಶಕರಾಗಿರುವ ಅವಶ್ಯಕತೆಯಿದೆ. ಆದುದರಿಂದ ಇದರ ಬಗ್ಗೆ ಯಾರಿಗೂ ತಪ್ಪು ಅಭಿಪ್ರಾಯಕ್ಕೆ ನಾನು ಅನ್ಯಥಾ ಅವಕಾಶ ಕೊಡದೆ ಇಂತಹ ಸೂಕ್ಷ್ಮ ವಿಷಯದಲ್ಲಿ ಅವರೆಲ್ಲರೂ ಸರಿಯಾಗಿ ನಡೆದುಕೊಳ್ಳುವುದು ಸೂಕ್ತವೆಂದು ನಾನು ವಿನಂತಿಸಿ ಕೊಳ್ಳುತ್ತೇನೆ.

ಕೇಂದ್ರ ಕಾರಾಗೃಹದಲ್ಲಿ ಹತ್ಯೆ ಪ್ರಕರಣ.

654 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಕಾರಾಗೃಹಗಳ ರಾಜ್ಯಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮೇ. 3, 1995ರಂದು ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ರೌಡಿಯೊಬ್ಬನ ಭೀಕರ ಹತ್ಯೆ ನಡೆದಿರುವುದು ನಿಜವೇ?*

ಆ) *ಈ ಸಂದರ್ಭದಲ್ಲಿ ಗೃಹ ಮತ್ತು ಸಾರಿಗೆ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಂದ ವಿಚಾರಣೆ ನಡೆಸಿ ಸರ್ಕಾರ ವರದಿ ತರಿಸಿಕೊಂಡಿರುವುದು ನಿಜವಲ್ಲವೇ?*

ಇ) *ಹಾಗಿದ್ದಲ್ಲಿ ಈ ವರದಿಯ ಸಾರಾಂಶವೇನು?*

ಈ) *ಸದರಿ ವರದಿಯಲ್ಲಿ ಶಿಫಾರಸ್ಸು ಮಾಡಿರುವ ಪ್ರಕಾರ 9 ಜನ ಸಿಬ್ಬಂದಿ ವರ್ಗದವರನ್ನು ಅಮಾನತ್ತಿನಲ್ಲಿಟ್ಟಿರುವುದು ನಿಜವೇ?*